ಕರ್ನಾಟಕ ಸರ್ಕಾರ

ಕಾಲೇಜು ಶಿಕ್ಷಣ ಇಲಾಖೆ

ಸಂಖ್ಯೆ:ಕಾಶಿಇ:38:ಇತರ:2021-22:ವ&ನಿ

ಕಾಲೇಜು & ತಾಂತ್ರಿಕ ಶಿಕ್ಷಣ ಆಯುಕ್ತರ ಕಛೇರಿ,
ಬೆಂಗಳೂರು, ದಿನಾಂಕ:16-07-2022.

## ಸುತ್ತೋಲೆ

ವಿಷಯ: ನಿಯೋಜನೆ/ಮರುಹಂಚಿಕೆ ಮೇರೆಗೆ ಕರ್ತವ್ಯ ನಿರ್ವಹಿಸುತ್ತಿರುವ ಬೋಧಕ/ ಬೋಧಕೇತರ ಸಿಬ್ಬಂದಿಗಳು ಹೆಚ್ಚುವರಿಯಾಗಿ ಪಡೆದಿರುವ ಮನೆ ಬಾಡಿಗೆ ಭತ್ಯೆಯನ್ನು ಕಟಾಯಿಸುವ ಬಗ್ಗೆ.

ಉಲ್ಲೇಖ: ಈ ಕಛೇರಿ ಸಮ ಸಂಖ್ಯೆ ಸುತ್ತೋಲೆ ದಿ:06-01-2022 ಮತ್ತು ದಿ:07.02.2022.

*****

ಮಹಾಲೇಖಪಾಲರ ಆಕ್ಷೇಪಣೆಯ ಹಿನ್ನೆಲೆಯಲ್ಲಿ ನಿಯೋಜನೆ/ಮರುಹಂಚಿಕೆ ಮೇಲಿರುವ ಬೋಧಕ/ ಬೋಧಕೇತರ ಸಿಬ್ಬಂದಿಯವರು ನಿಯೋಜನೆ/ ಮರುಹಂಚಿಕೆ ಅವಧಿಯಲ್ಲಿ ಹೆಚ್ಚುವರಿಯಾಗಿ ಪಡೆದಿರುವ ಮನೆ ಬಾಡಿಗೆ ಭತ್ಯೆಯನ್ನು ನಿಯಮಾನುಸಾರ ಲೆಕ್ಕಚಾರ ಮಾಡಿ ಸಂಬಂಧಪಟ್ಟ ಬೋಧಕ/ ಬೋಧಕೇತರ ಸಿಬ್ಬಂದಿಯವರಿಂದ ವಸೂಲಿ ಮಾಡಿ ಸರ್ಕಾರಕ್ಕೆ ಜಮೆ ಮಾಡಲು ಹಾಗೂ ಇನ್ನು ಮುಂದೆ ಹೆಚ್ಚುವರಿ ಮನೆ ಬಾಡಿಗೆ ಭತ್ಯೆ ಪಡೆಯುತ್ತಿರುವ ಬೋಧಕ/ಬೋಧಕೇತರ ಸಿಬ್ಬಂದಿಗೆ ನಿಯೋಜನೆ/ಮರುಹಂಚಿಕೆ ಕರ್ತವ್ಯ ನಿರ್ವಹಿಸುತ್ತಿರುವ ಸ್ಥಳದ ಮನೆ ಬಾಡಿಗೆ ಭತ್ಯೆ ನೀಡಲು ಕ್ರಮವಹಿಸಿ ಈ ಕಛೇರಿಗೆ ವರದಿ ನೀಡುವಂತೆ ಉಲ್ಲೇಖಿತ ಸುತ್ತೋಲೆಗಳಲ್ಲಿ ಸೂಚಿಸಲಾಗಿತ್ತು. ಆದಾಗ್ಯೂ ಇದುವರೆವಿಗೆ ಬಹುತೇಕ ಪ್ರಕರಣಗಳಲ್ಲಿ ಹೆಚ್ಚುವರಿಯಾಗಿ ಪಡೆದಿರುವ ಮನೆಬಾಡಿಗೆ ಭತ್ಯೆಯನ್ನು ಕಟಾಯಿಸಿ ಸರ್ಕಾರಕ್ಕೆ ಜಮೆ ಮಾಡದೇ ಇರುವುದನ್ನು ಗಂಭೀರವಾಗಿ ಪರಿಗಣಿಸಿದೆ.

ಪ್ರಯುಕ್ತ ಕೂಡಲೇ ನಿಯೋಜನೆ/ ಮರುಹಂಚಿಕೆ ಅವಧಿಯಲ್ಲಿ ಹೆಚ್ಚುವರಿಯಾಗಿ ಪಡೆದಿರುವ ಮನೆ ಬಾಡಿಗೆ ಭತ್ಯೆಯ ಮೊತ್ತವನ್ನು ಗರಿಷ್ಟ 10 ಕಂತುಗಳಲ್ಲಿ ನಿಯಮಾನುಸಾರ ಕಟಾಯಿಸಿ ಸರ್ಕಾರಕ್ಕೆ ಜಮೆ ಮಾಡಿ ಈ ಕಛೇರಿಗೆ ವರದಿ ನೀಡುವಂತೆ ಹಾಗೂ ಹೆಚ್ಚುವರಿ ಮನೆ ಬಾಡಿಗೆ ಭತ್ಯೆ ಪಡೆಯುತ್ತಿರುವ ಬೋಧಕ/ ಬೋಧಕೇತರ ಸಿಬ್ಬಂದಿಗೆ ನಿಯೋಜನೆ/ಮರುಹಂಚಿಕೆ ಕರ್ತವ್ಯ ನಿರ್ವಹಿಸುತ್ತಿರುವ ಸ್ಥಳದ ಮನೆ ಬಾಡಿಗೆ ಭತ್ಯೆ/ನಗರ ಪರಿಹಾರ ಭತ್ಯೆ ನೀಡಲು ಕ್ರಮವಹಿಸಿ ಈ ಕಛೇರಿಗೆ ವರದಿ ನೀಡುವಂತೆ ಸೂಚಿಸಲಾಗಿದೆ.

**(ಇ-ಕಡತದಲ್ಲಿ ಮಾನ್ಯ ಆಯುಕ್ತರಿಂದ ಅನುಮೋದಿಸಲ್ಪಟ್ಟಿದೆ)**

S.B. [signature]

**ನಿರ್ದೇಶಕರು**
**ಕಾಲೇಜು ಶಿಕ್ಷಣ ಇಲಾಖೆ**

**ಇವರಿಗೆ-ಅಗತ್ಯ ಕ್ರಮಕ್ಕಾಗಿ.**

1. ಕಾಲೇಜು ಶಿಕ್ಷಣ ಪ್ರಾದೇಶಿಕ ಕಛೇರಿಗಳ ಜಂಟಿ ನಿರ್ದೇಶಕರುಗಳಿಗೆ- ತಮ್ಮ ಕಛೇರಿಗೆ ಸಂಬಂಧಪಟ್ಟ ಸಿಬ್ಬಂದಿ ಹಾಗೂ ಅನುದಾನಿತ ಕಾಲೇಜುಗಳ ಸಿಬ್ಬಂದಿಗಳು ಹೆಚ್ಚುವರಿಯಾಗಿ ಪಡೆದಿರುವ ಮನೆ ಬಾಡಿಗೆ ಭತ್ಯೆ/ ನಗರ ಪರಿಹಾರ ಭತ್ಯೆಯನ್ನು ಸರ್ಕಾರಕ್ಕೆ ಜಮೆ ಮಾಡಲು ಸೂಕ್ತ ಕ್ರಮವಹಿಸುವುದು
2. ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳ ಪ್ರಾಂಶುಪಾಲರುಗಳಿಗೆ-ತಮ್ಮ ಕಾಲೇಜಿನಿಂದ ನಿಯೋಜಿತರಾಗಿರುವ ಸಿಬ್ಬಂದಿಗಳು ಹೆಚ್ಚುವರಿಯಾಗಿ ಪಡೆದಿರುವ ಮನೆ ಬಾಡಿಗೆ ಭತ್ಯೆ/ ನಗರ ಪರಿಹಾರ ಭತ್ಯೆಯನ್ನು ಸರ್ಕಾರಕ್ಕೆ ಜಮೆ ಮಾಡಲು ಸೂಕ್ತ ಕ್ರಮವಹಿಸುವುದು.
3. ಮ್ಯಾನೇಜರ್, ಹಣ ಮತ್ತು ಪಾವತಿ ವಿಭಾಗ, ಸೇವಾ ವಿಭಾಗ, ಕೇಂದ್ರಕಛೇರಿ, ಬೆಂಗಳೂರು- ಕೇಂದ್ರಕಛೇರಿಯಿಂದ ನಿಯೋಜಿತರಾಗಿರುವ ಸಿಬ್ಬಂದಿಗಳು ಹೆಚ್ಚುವರಿಯಾಗಿ ಪಡೆದಿರುವ ಮನೆ ಬಾಡಿಗೆ ಭತ್ಯೆ/ ನಗರ ಪರಿಹಾರ ಭತ್ಯೆಯನ್ನು ಸರ್ಕಾರಕ್ಕೆ ಜಮೆ ಮಾಡಲು ಸೂಕ್ತ ಕ್ರಮವಹಿಸುವುದು.
4. ಮಾಹಿತಿ ಅಧಿಕಾರಿಗಳು, ಮಾಹಿತಿ ತಂತ್ರಜ್ಞಾನ ವಿಭಾಗ, ಕೇಂದ್ರ ಕಛೇರಿ, ಬೆಂಗಳೂರು-(ಇಲಾಖಾ ವೆಬ್‌ಸೈಟ್‌ನಲ್ಲಿ ಪ್ರಕಟಿಸಲು)
5. ಕಛೇರಿ ಪ್ರತಿ.

*DCE 38 Circular HRA*

Scanned with CamScanner